(ಇಂದು ದಿನಾಂಕ:**17/10/2025** ರಂದು ಆದೇಶ ದಿನಾಂಕ:**23/09/2025** ರಂತೆ ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.)

**ಪಾಟೀ ಸವಾಲು 5 ನೇ ಎದುರುದಾರರ ಪರ ಶ್ರೀ ಜಿ.ಎನ್.ಜಿ. ವಕೀಲರಿಂದಃ–**

6. ನಾನು ಪಿಯುಸಿಯವರೆಗೆ ಓದಿದ್ದೇನೆ. 5 ನೇ ಎದುರುದಾರ ಒಂದು ದಾವೆ ಹೂಡಿ ಡಿಕ್ರಿ ಪಡೆದಿದ್ದಾರೆ ಎನ್ನುವುದು ನಿಜ. ನಾವು ದಾವೆ ಸಂಖ್ಯೆ ಓ.ಎಸ್ 194/2014 ಹೂಡಿದ್ದೇವೆ ಎನ್ನುವುದು ನಿಜ. ಸದರಿ ದಾವೆಯಲ್ಲಿ ಸಾಕ್ಷಿ ಹೇಳಿದ್ದೇನೆ ಎನ್ನುವುದು ನಿಜ. ವಿವಾದಿತ ಆಸ್ತಿಯಲ್ಲಿ ಒಂದು ಚಹಾದ ಅಂಗಡಿ ಮತ್ತು ಒಂದು ಮನೆ ಪರಸ್ಪರ ಹೊಂದಿಕೊಂಡು ಇದ್ದವು ಎನ್ನುವುದು ನಿಜ.

7. ಮೂಲತಃ ಆಸ್ತಿ ಹನುಮಂತಗೌಡ ಪಾಟೀಲ ಎನ್ನುವವರಿಗೆ ಸಂಬಂಧಿಸಿದ್ದು ಎನ್ನುವುದು ಸುಳ್ಳು. ಅದು ನಮ್ಮ ತಂದೆ ಆಸ್ತಿಯಾಗಿತ್ತು. ಕಳೆದ 50-60 ವರ್ಷಗಳಿಂದ ಚಹಾದ ಅಂಗಡಿ ಇತ್ತು ಎನ್ನುವುದು ಸುಳ್ಳು. 2001 ರಿಂದ ಮಾತ್ರ ಚಹಾದ ಅಂಗಡಿ ಇತ್ತು. ಹನುಮಂತಗೌಡ ಪಾಟೀಲ ಎನ್ನುವವರಿಂದ ಚಂದ್ರಾಬಾಯಿ ಮನೆಯವರು ಆಸ್ತಿಯನ್ನು ಬಾಡಿಗೆಗೆ ಪಡೆದಿದ್ದರು ಎನ್ನುವುದು ಸುಳ್ಳು. ನನ್ನ ತಂದೆಯೇ ಆಸ್ತಿಯನ್ನು ಬಾಡಿಗೆಗೆ ಕೊಟ್ಟಿದ್ದರು. ಚಹಾದ ಅಂಗಡಿ ನಡೆಸಲು ಆಗ ಪರವಾನಿಗೆ ಪಡೆದಿರಬಹುದು.

8. ಜಾಗೆಯ ಕುರಿತು ಅರ್ಜಿದಾರರು ನಮಗೆ ಪರಿಹಾರ ಕೊಟ್ಟಿದ್ದಾರೆ ಎನ್ನುವುದು ನಿಜ. ರೂ.14 ಲಕ್ಷ ಚಿಲ್ಲರೆಯನ್ನು ವ್ಯಾಪಾರ ಮತ್ತು ಕಟ್ಟಡ ನಷ್ಟದ ಕುರಿತು ಇಡಲಾಗಿದೆ ಎನ್ನುವುದು ಸುಳ್ಳು. ಆದುದರಿಂದ 5 ನೇ ಎದುರುದಾರರು ಸದರಿ ಪರಿಹಾರ ಪಡೆಯಲು ಹಕ್ಕು ಹೊಂದಿದ್ದಾರೆ ಎನ್ನುವುದು ಸುಳ್ಳು. ಕಟ್ಟಡ ನಾವು ಕಟ್ಟಿಸಿದ್ದಲ್ಲ ಎನ್ನುವುದು ಸುಳ್ಳು. ಕಟ್ಟಡವನ್ನು ಹನುಮಂತಗೌಡ ಪಾಟೀಲ ಕಟ್ಟಿಸಿದ್ದರು ಎನ್ನುವುದು ಸುಳ್ಳು. 5 ನೇ ಎದುರುದಾರರು ಕಾಲಕಾಲಕ್ಕೆ ದುರಸ್ಥಿ ಮಾಡಿ ಉಪಯೋಗಿಸಿದ್ದಾರೆ ಎನ್ನುವುದು ಸುಳ್ಳು.

9. ನನ್ನ ತಂದೆ ಮತ್ತು 5 ನೇ ಎದುರುದಾರರ ಗಂಡ ಮಾತುಕತೆ ಮಾಡುವ ಕಾಲಕ್ಕೆ ನಾನು ಇರಲಿಲ್ಲ. ಅವರು ದಾಖಲೆ ಮಾಡಿಕೊಂಡಿಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಹಾವೇರಿ.